# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 10/ಸಭೆ/ಪಿಆರ್/06/2020-21 ದಿನಾಂಕ: 19/12/2020.

ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ.10 ದೊಡ್ಡಬೊಮ್ಮಸಂದ್ರ ವಾರ್ಡ್ ಕಛೇರಿಯಲ್ಲಿ ದಿನಾಂಕ: 19/12/2020 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ವಾರ್ಡ್ ಸಮಿತಿ ಸದಸ್ಯರು**

1. ಶ್ರೀ ಅಮರ್ ಸಿಂಗ್, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
2. ಶ್ರೀ ವಿಜಯ್ ಬೆನಗಿ, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
3. ಶ್ರೀ ಸುಜಿತ್ ಸೋನಿಲ್, ವಸತಿ ಕ್ಷೇಮಾಭಿವೃದ್ದಿ ಸಂಘದ ಸದಸ್ಯರು
4. ಶ್ರೀ ಪ್ರಕಾಶ್ ಕೆ, ಸದಸ್ಯರು
5. ಶ್ರೀ ದಯಾಳ್, ಸದಸ್ಯರು
6. ಶ್ರೀ ಶ್ರೀನಿವಾಸ್, ಸದಸ್ಯರು
7. ಶ್ರೀ ಆರ್.ಎಂ. ಶ್ರೀನಿವಾಸ್, ಸದಸ್ಯರು
8. ಶ್ರೀ ಗೋಪಾಲ್‌ಕೃಷ್ಣ, ಸದಸ್ಯರು
9. ಶ್ರೀ ಮಲ್ಯಾದಿ, ಸದಸ್ಯರು

**ಹಾಜರಿದ್ದ ಅಧಿಕಾರಿ/ಸದಸ್ಯರು**

1. ಶ್ರೀ ಜಿ.ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ಹಾಗೂ ಸ.ಕಾ.ಅ, ಕೊಡಿಗೇಹಳ್ಳಿ ಉಪವಿಭಾಗ
2. ಶ್ರೀ ಶ್ವೇತಾ ಎನ್.ಆರ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀಮತಿ ಡಾ ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ಯಲಹಂಕ ವಲಯ, ಬೆಂಗಳೂರು
5. ಶ್ರೀ ಸತ್ಯನಾರಾಯಣ, ಕಂದಾಯ ವಸೂಲಿಗಾರರು
6. ಶ್ರೀ ಪ್ರಭಾಕರ್, ಹಿರಿಯ ಆರೋಗ್ಯ ಪರಿವೀಕ್ಷಕರು
7. ಶ್ರೀ ಮಹೇಶ್ ಕುಮಾರ್ ಎಲ್, ಕಿರಿಯ ಆರೋಗ್ಯ ಪರಿವೀಕ್ಷಕರು
8. ಶ್ರೀ ಪ್ರಕಾಶ್ ಕೆ, ಸದಸ್ಯರು
9. ಶ್ರೀ ಶ್ರೀನಿವಾಸ್, ಸದಸ್ಯರು
10. ಶ್ರೀ ಆರ್ ಎಂ ಶ್ರೀನಿವಾಸ್, ಸದಸ್ಯರು
11. ಶ್ರೀ ಗೋಪಾಲ್‌ಕೃಷ್ಣ, ಸದಸ್ಯರು
12. ಶ್ರೀ. ಎಂ.ಇ. ಪಿಳ್ಳಪ್ಪ
13. ಶ್ರೀಮತಿ. ಬೇಬಿ ರಾಣಿ

ಪು.ತಿ.ನೋ..

ಗೈರು ಹಾಜರಾಗಿರುವ ಅಧಿಕಾರಿಗಳು

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ವಿದ್ಯಾರಣ್ಯಪುರ, ಬೆಂಗಳೂರು
2. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲಹಂಕ ವಲಯ, ಬೆಂಗಳೂರು
3. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೊಲೀಸ್ ಠಾಣೆ (ಲಾ ಅಂಡ್ ಆರ್ಡರ್)
4. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೊಲೀಸ್ ಠಾಣೆ (ಸಂಚಾರ)
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಯಲಹಂಕ ವಲಯ, ಬಿ.ಬಿ.ಎಂ.ಪಿ

**ಶ್ರೀ ಜಿ. ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ಶ್ರೀಮತಿ ಡಾ॥ ಶೋಭ ನಾಗೇಶ್, ಆರೋಗ್ಯ ವೈದ್ಯಾಧಿಕಾರಿ:-** ಕೋವಿಡ್ 19 ಗೆ ಸಂಬಂಧಿಸಿದಂತೆ ವಾರ್ಡ್ ನಂ.10ರ ವ್ಯಾಪಿಯಲ್ಲಿ ಪ್ರತಿ ದಿನ ನಾಗರೀಕರನ್ನು ಪರೀಕ್ಷೆ ಮಾಡಲಾಗಿ ಪ್ರಸ್ತುತ ಕೋವಿಡ್ ಪಾಸಿಟಿವ್ ಕೇಸ್‌ಗಳು ಕಡಿಮೆಯಾಗಿರುವುದಾಗಿ ತಿಳಿಸಿರುತ್ತಾರೆ. ಪ್ರಸ್ತುತ ಚಳಿಗಾಲವಿದ್ದು ಕೋವಿಡ್ ತ್ವರಿತಗತಿಯಲ್ಲಿ ಹರಡುವ ಸಂಭವವಿರುವುದರಿಂದ ಹೆಚ್ಚಿನ ಕಾಳಜಿ ವಹಿಸಬೇಕೆಂದು ಕೋರಿರುತ್ತಾರೆ.

**ಗೋಪಾಲ್‌ಕೃಷ್ಣ, ಶ್ರೀನಿವಾಸ್, ಸದಸ್ಯರು:-** ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿನ ಕೆಲವೊಂದು ರಸ್ತೆಗಳಲ್ಲಿ ಬೀದಿ ದೀಪಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಆದ್ದರಿಂದ ಸದರಿ ದೀಪಗಳನ್ನು ದುರಸ್ಥಿ ಮಾಡಲು ಕೋರಿರುತ್ತಾರೆ.

**ಬೇಬಿರಾಣಿ, ಪಿಳ್ಳಪ್ಪ, ಗೋಪಾಲ್‌ಕೃಷ್ಣ, ಸದಸ್ಯರು:-** ದೊಡ್ಡಬೊಮ್ಮಸಂದ್ರ ವ್ಯಾಪ್ತಿಯಲ್ಲಿನ ಕೆಲವೊಂದು ಪ್ರದಶಗಳಲ್ಲಿ ಬ್ಲಾಕ್ ಸ್ಪಾಟ್‌ಗಳಿದ್ದು, ಸದರಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಲು ಕೋರಿರುತ್ತಾರೆ. ಅದರಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

ಮಾನ್ಯ ವಿಶೇಷ ಆಯುಕ್ತರು (ಆಡಳಿತ), ಬಿ.ಬಿ.ಎಂ.ಪಿ ರವರು ಸಭೆಯಲ್ಲಿ ಚರ್ಚಿಸಲು ಈ ಕೆಳಕಂಡ ಮೂರು ಅಂಶಗಳನ್ನು ತಿಳಿಸಿರುತ್ತಾರೆ.

1. ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ.10096/2020 (GIM-PIL) ರಲ್ಲಿನ ನಿರ್ದೇಶನದಂತೆ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ Begging and Hawking Children identification ಸರ್ವೆ ಕೈಗೊಳ್ಳಬೇಕಾಗಿರುತ್ತದೆ.
2. ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ.15768/2013 ರಲ್ಲಿ ಆದೇಶ ನೀಡಿರುವಂತೆ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ ಶಾಲೆಗೆ ಹಾಜರಾಗಲು ಕ್ರಮವಹಿಸುವ ಬಗ್ಗೆ.
3. ವಾರ್ಡಿನ ವ್ಯಾಪ್ತಿ ಪ್ರದೇಶದಲ್ಲಿ ರಾತ್ರಿ ಹೊತ್ತು ಬೀದಿ ಬದಿ ಮಲಗುವವರ ತಪಾಸಣೆ ಕೈಗೊಂಡು ನಿರಾಶ್ರಿತರ ಸಂಖ್ಯೆಯನ್ನು ಕಲೆ ಹಾಕುವ ಬಗ್ಗೆ.

ಮು.ತಿ.ನೋ..

ಮೇಲ್ಕಂಡ 3 (ಮೂರು) ವಿಷಯಗಳ ಬಗ್ಗೆ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ಮಾಹಿತಿಯನ್ನು ನೀಡುತ್ತಾ, ಈ ಸಂಧರ್ಭದಲ್ಲಿ ಎಲ್ಲಾ ಸರ್ವೆ ಕಾರ್ಯಗಳಿಗೆ ಸದಸ್ಯರುಗಳು ಅಗತ್ಯ ಮಾಹಿತಿಗಳನ್ನು ನೀಡಲು ಹಾಗೂ ಸರ್ವೆ ಕಾರ್ಯದಲ್ಲಿ ಸಹಕರಿಸಲು ಕೋರಿದ್ದು, ಎಲ್ಲಾ ಸದಸ್ಯರುಗಳು ಒಮ್ಮತದಿಂದ ನ್ಯಾಯಾಲಯದ ಆದೇಶವನ್ನು ಪಾಲಿಸಲು ಭೌತಿಕವಾಗಿ ಸಹಕರಿಸಲಾಗುವುದೆಂದು ತಿಳಿಸಿದರು.

ಶ್ರೀ ಜಿ. ಶ್ರೀನಿವಾಸಮೂರ್ತಿ, ನೋಡಲ್ ಅಧಿಕಾರಿ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

Sweetha . N K .

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 10, ದೊಡ್ಡಬೊಮ್ಮಸಂದ್ರ

19/2/2020

ನೋಡೆಲ್ ಅಧಿಕಾರಿ ವಾರ್ಡ್–10 ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ ರವರಿಗೆ ಸಲ್ಲಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ/ಯೋಜನಾ ವಿಭಾಗ, ಬಿ.ಬಿ.ಎಂ.ಪಿ ರವರಿಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿದ್ಯಾರಣ್ಯಪುರ ವಿಭಾಗ ರವರಿಗೆ ಸಲ್ಲಿಸುತ್ತಾ ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಹಾಗೂ ಘನತ್ಯಾಜ್ಯ ನಿರ್ವಹಣೆಯ ಗುತ್ತಿಗೆದಾರರೊಂದಿಗೆ ಸಭೆಗೆ ಹಾಜರಾಗಲು ಕೋರಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ, ಬೆಂಗಳೂರು.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೀದಿ ದೀಪಗಳ ನಿರ್ವಹಣೆ, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ವಿದ್ಯಾರಣ್ಯಪುರ, ಬೆಂಗಳೂರು ರವರಿಗೆ ಸಲ್ಲಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗ, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
10. ಕಾಂಟ್ಯಾಕ್ಟ್ ಟ್ರೇಸಿಂಗ್ ನೋಡೆಲ್ ಅಧಿಕಾರಿ, ಬ್ಯಾಟರಾಯನಪುರ ವಿಭಾಗ, ಬೆಂಗಳೂರು ರವರಿಗೆ ಸಲ್ಲಿಸಿದೆ.
11. ಹೋಮ್ ಕ್ವಾರಂಟೇನ್ ಸ್ಕ್ವಾಡ್ ನೋಡೆಲ್ ಅಧಿಕಾರಿ, ಬ್ಯಾಟರಾಯನಪುರ ವಿಭಾಗ, ಬೆಂಗಳೂರು ರವರಿಗೆ ಸಲ್ಲಿಸಿದೆ.
12. ಕಲ್ಯಾಣಾಧಿಕಾರಿ, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
13. ಉಪ ವಲಯ ಅರಣ್ಯಾ ಸಂರಕ್ಷಣಾಧಿಕಾರಿಗಳು, ಯಲಹಂಕ ವಲಯ, ಬೆಂಗಳೂರು ರವರಿಗೆ ಸಲ್ಲಿಸಿದೆ.
14. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೋಲೀಸ್ ಠಾಣೆ (ಲಾ ಅಂಡ್ ಆರ್ಡರ್) ರವರಿಗೆ ಸಲ್ಲಿಸಿ ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
15. ಠಾಣಾಧಿಕಾರಿಗಳು, ವಿದ್ಯಾರಣ್ಯಪುರ ಪೋಲೀಸ್ ಠಾಣೆ (ಸಂಚಾರ) ರವರಿಗೆ ಸಲ್ಲಿಸಿ ಸಭೆಗೆ ತಪ್ಪದೇ ಹಾಜರಿರಲು ಕೋರಿದೆ.
16. ಕಛೇರಿ ಕಡತಕ್ಕೆ.